**O. S. No:45/2024**
**DW:4**

(ಇಂದು ದಿನಾಂಕಃ **10-07-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಶ್ರೀಮತಿ ಪಿ ಸಿ ಎಚ್ ವಕೀಲರಿಂದ:**

ನನ್ನ ಮುಖ್ಯ ವಿಚಾರಣೆ ಸಲುವಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿರುವ ವಿಷಯಗಳು ನಿಜ ಇರುತ್ತವೆ. ಸಾಕ್ಷಿಯು ನಿಡಿ-4 ರ ಮೇಲಿರುವ ಸಹಿ ನೋಡಿ ಗುರುತಿಸಿದ್ದು, ಅದನ್ನು **ನಿಡಿ-4 (ಇ)** ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ದೇವಕ್ಕ ಜಟಕಾದವರ ರವರ ಹೇಳಿಕೆಯ ಮೇರೆಗೆ ತಯಾರಿಸಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಪಿ ಕೆ ಎ ವಕೀಲರಿಂದಃ**

ನಾನು 1993-94 ರಿಂದ ದಸ್ತಾವೇಜು ಬರಹಗಾರ ಎಂದು ಕೆಲಸ ಮಾಡುತ್ತಿದ್ದೇನೆ. ನಿಡಿ-4 ನ್ನು 2012 ರಲ್ಲಿ ಮಾಡಲಾಗಿರುತ್ತದೆ. ಸಾಮಾನ್ಯವಾಗಿ ಮೃತ್ಯು ಪತ್ರ ತಯಾರಿಸುವಾಗ ಆಸ್ತಿ ಯಾರ ಹೆಸರಿನಲ್ಲಿದೆ ಎಂದು ಹಾಗೂ ಅದರ ಚೆಕ್ಕುಬಂದಿ ಮತ್ತಿತರ ವಿವರಗಳನ್ನು ಪಡೆದುಕೊಂಡಿರುತ್ತೇವೆ. ಮೃತ್ಯು ಪತ್ರ ಬರೆದುಕೊಡುವವರ ದೈಹಿಕ ಹಾಗೂ ಮಾನಸಿಕ ಸ್ಥಿತಿಯನ್ನು ಗಮನಿಸುತ್ತೇನೆ. ನಿಡಿ-4 ನ್ನು ಬರೆಯುವ ವೇಳೆ ಇಬ್ಬರು ಸಾಕ್ಷಿದಾರರು ಹಾಗೂ ದೇವಕ್ಕ ಎನ್ನುವವರು ಬಂದಿರುತ್ತಾರೆ. ನನಗೆ ನೋಟಿಸ ಬಂದ ಕಾರಣ ನಾನು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬಂದಿರುತ್ತೇನೆ. ದೇವಕ್ಕ ರವರು ನನ್ನ ಬಳಿ ಬಂದಾಗ ನಡೆದುಕೊಂಡು ಬಂದಿರುತ್ತಾರೋ ಅಥವಾ ವಾಹನದಲ್ಲಿ ಬಂದಿರುತ್ತಾರೋ ನನಗೆ ಗೊತ್ತಿಲ್ಲ. ಮೃತ್ಯು ಪತ್ರ ಮಾಡುವ ವೇಳೆ ಪ್ರತಿವಾದಿ ಬಂದಿರಲಿಲ್ಲ. ದೇವಕ್ಕ ರವರು 2012 ರಲ್ಲಿ ನನ್ನ ಬಳಿ ಬಂದಿದ್ದರು. ಸದರಿಯವರಿಗೆ ಎಷ್ಟು ಜನ ಮಕ್ಕಳಿರುತ್ತಾರೆ ಎಂದು ನಾನು ವಿಚಾರಿಸಿರುತ್ತೇನೆ. ಸದರಿ ಮೃತ್ಯು ಪತ್ರವನ್ನು ದೇವಕ್ಕ ರವರು ತನ್ನ ಹಿರಿಯ ಮಗನಿಗೆ ಮಾಡಿರುತ್ತಾರೆ. ದೇವಕ್ಕ ರವರು ನನ್ನ ಸಮಕ್ಷಮ ಸಹಿ ಮಾಡಿರುತ್ತಾರೆ. ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**